ದಿನಾಂಕಃ 12.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

ನಾನು ದ್ವಿತೀಯ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ಸಮನ್ಸ್ ಬಂದಿರುವುದಿಲ್ಲ. ನನ್ನನ್ನು ಬಸಪ್ಪ ಲಕ್ಕಪ್ಪ ಕುಂಬಾರ್‌ರವರು ಸಾಕ್ಷ್ಯ ಹೇಳಲು ಕರೆದಿರುತ್ತಾರೆ. ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇದೆ. ನನ್ನ ಸಾಕ್ಷ್ಯಪಮಾಣಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದರಲ್ಲಿರುವ ವಿಚಾರವನ್ನು ನಾನೇ ಹೇಳಿ ಬರೆಸಿದ್ದೇನೆ. ಪ್ರತಿವಾದಿಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು, ಸ್ಥಿತಿವಂತರಾಗಿರುತ್ತಾರೆ ಎಂದರೆ ಸರಿ. ಊರಿನಲ್ಲಿ ಯಾರಿಗಾದರೂ ಹಣದ ಅಡಚನೆ ಇತ್ತು ಎಂದರೆ ವಾದಿ ಸಾಲ ಕೊಡುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಗೆಳೆತನ ಚೆನ್ನಾಗಿದೆ ಎಂದರೆ ಸರಿ. ಅಕ್ಕಪಕ್ಕದ ಮನೆಯವರು ಆಗಿರುತ್ತಾರೆ. ನಾನು ಮತ್ತು ಬಸಪ್ಪ ಕುಂಬಾರ್ ಎಲ್ಲಾ ವ್ಯವಹಾರಗಳನ್ನು ಕೂಡಿಯೇ ಮಾಡುತ್ತೇವೆ ಎಂದರೆ ಸರಿಯಲ್ಲ. ಅವರ ಕೆಲವೊಂದು ಕಾಗದಪತ್ರಗಳಿಗೆ ನಾನು ಸಹಿ ಮಾಡಿದ್ದೇನೆ ಹಾಗೂ ನನ್ನ ಕೆಲವೊಂದು ಕಾಗದ ಪತ್ರಗಳಿಗೆ ಅವರು ಸಹಿ ಮಾಡಿದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ನಡುವೆ 2 ಕಾಗದಪತ್ರಗಳು ಆಗಿರುತ್ತವೆ. ನಾನು ಪ್ರತಿವಾದಿಯ ಹೊಲ ಮತ್ತು ಮನೆಯನ್ನು ನೋಡಿದ್ದೇನೆ, ಅವರ ಪಾಲಿಗೆ 5 ಎಕರೆ 22 ಗುಂಟೆ ಜಮೀನು ಬಂದಿರುತ್ತದೆ. ವಾದಿ ಮತ್ತು ಪ್ರತಿವಾದಿಯ ನಡುವೆ ಎರಡು ಕಾಗದ ಪತ್ರಗಳಾಗಿರುವ ಕಾರಣವೇನು ಎಂದರೆ ಸಾಕ್ಷಿ ಪ್ರತಿವಾದಿ ಅವರ ಮನೆಯ ಅಡಚನೆಗಾಗಿ ಸಾಲ ಮಾಡಿದ್ದರು, ಅದಕ್ಕೆ ಅವರು ಹೊಲ ಖರೀದಿ ಕೊಡುತ್ತೇನೆ ಎಂದು ಹೇಳಿದ್ದಾರೆ ಎಂದು ನುಡಿಯುಉತ್ತಾರೆ.

2. 2 ನೇ ಖರೀದಿ ಕರಾರುಪತ್ರವನ್ನು ಮಾಡಿಕೊಳ್ಳುವಾಗ 1 ನೇ ಖರೀದಿ ಕರಾರುಪತ್ರವನ್ನು ರದ್ದು ಮಾಡಿಲ್ಲ. ಬೀರಪ್ಪರವರ ಜಮೀನು ಹಿರಿಯರ ಆಸ್ತಿ ಎಂದರೆ ಸಾಕ್ಷಿ ಸ್ವಂತ ಖರೀದಿ ಮಾಡಿರುವ ಆಸ್ತಿ ಎನ್ನುತ್ತಾರೆ. ಅದನ್ನು ತೋರಿಸಲು ಕಾಗದಪತ್ರಗಳನ್ನು ನೋಡಿದ್ದೇನೆ. ಯಾವ ದಾಖಲೆ ನೋಡಿದ್ದೀರಿ ಎಂದರೆ ಸಾಕ್ಷಿ ಉತಾರವನ್ನು ನೋಡಿದ್ದೇನೆ ಎನ್ನುತ್ತಾರೆ. ಬೀರಪ್ಪರವರಿಗೆ ಇಬ್ಬರು ಮಕ್ಕಳು ಮತ್ತು 5

ಜನ ಅಕ್ಕತಂಗಿಯರು ಇರುತ್ತಾರೆ. ದಾವಾ ಸ್ವತ್ತಿನ ಕಬ್ಜೆಯಲ್ಲಿ ಬೀರಪ್ಪರವರ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. ಬೀರಪ್ಪರವರು ದಿಃ18.02.2015 ರಲ್ಲಿ ಅಡಚನೆ ಇದೆ ಎಂದು ನನಗೆ ಹೇಳಿದರು. ಆಗ ನನ್ನ ಜೊತೆಗೆ ಮಲ್ಲಪ್ಪ ನಿಂಗಪ್ಪ ಸಣ್ಣಕ್ಕಿ, ಬಸಪ್ಪ ಲಕ್ಕಪ್ಪ ಕುಂಬಾರ್ ಮತ್ತು ಬೀರಪ್ಪ ರಾಯಪ್ಪ ಡೋಣಿ ಇದ್ದರು. ಬೀರಪ್ಪರವರಿಗೆ ಅಡಚನೆ ಇದೆ ಎಂದು ಹೇಳಿದಾಗ ನಾನು ಯಾವುದರ ಸಂಭಂದ ಮಾಡಿಕೊಂಡಿದ್ದೀರಿ ಎಂದು ಕೇಳಿದೆ.

3. ಯಾವ ಕಾರಣದಿಂದ ಸಾಲವಿದೆ ಎಂದು ಬೀರಪ್ಪರವರು ಹೇಳಿದರು ಎಂದರೆ ಸಾಕ್ಷಿ ಅವರ ಮನೆಯ ಅಡಚನೆಗಾಗಿ ಎಂದು ನುಡಿಯುತ್ತಾರೆ. ಬೀರಪ್ಪರವರು ಸರ್ವೇ ನಂ.296/2 ರಲ್ಲಿ 2 ಎಕರೆ 14 ಗುಂಟೆ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದರು. ಮಾತುಕತೆ ಅವರ ಮನೆಯಲ್ಲಿಯೇ ಆಯಿತು. ಆ ಸಮಯದಲ್ಲಿ ಅವರ ಕುಟುಂಬದವರೆಲ್ಲಾ ಇದ್ದರು. ಅವರಿಗೆ ವ್ಯವಹಾರದ ಬಗ್ಗೆ ಒಪ್ಪಿಗೆ ಇದೆಯಾ ಎಂದು ಕೇಳಿದೆ, ಅವರು ಒಪ್ಪಿಗೆ ಇದೆ ಎಂದು ಹೇಳಿದರು. ಆ ಸಮಯದಲ್ಲಿ ಹೊಲದ ವ್ಯವಹಾರ 9 ಲಕ್ಷಕ್ಕೆ ಆಗಿದ್ದು, 2 ಎಕರೆ 14 ಗುಂಟೆಗೆ ಆಗಿರುತ್ತದೆ. ಎಲ್ಲಾ ವ್ಯವಹಾರದ ಹಣವೆಲ್ಲಾ ಮುಟ್ಟಿದ ನಂತರ ಕಬ್ಜೆಯನ್ನು ಕೊಡುತ್ತೇನೆ ಎಂದು ಹೇಳಿದರು. ಖರೀದಿ ಕರಾರುಪತ್ರಕ್ಕೆ ಬೀರಪ್ಪರವರ ಹೆಂಡತಿ ಮಕ್ಕಳೆಲ್ಲಾ ಸಹಿ ಮಾಡಬೇಕೆಂದು ಮಾತುಕತೆಯಾಗಿತ್ತು. ಬೀರಪ್ಪರವರಿಗೆ ಇದ್ದ ಸಾಲದಪತ್ರಗಳನ್ನು ನಾನು ನೋಡಿರುತ್ತೇನೆ. ಅವುಗಳಲ್ಲಿ ಏನು ಇತ್ತು ಎಂದರೆ ಸಾಕ್ಷಿ ನಾನು ಅವುಗಳನ್ನು ನೋಡಿಲ್ಲ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ